ಸರ್ಕಾರ ಬಸವಣ್ಣನವರನ್ನು 'ಸಾಂಸ್ಕೃತಿಕ ನಾಯಕ'ನೆಂದು ಘೋಷಿಸಿತ್ತು. ಎಲ್ಲರೂ ಬಸವಣ್ಣನ ವಚನಗಳಿಂದಲೇ ತಮ್ಮ ಮಾತುಗಳನ್ನು ಆರಂಭಿಸಿದರು. ಉಪವಿಭಾಗಾಧಿಕಾರಿಗಳು ತಾವೂ ಒಂದು ವಚನವನ್ನು ಹೇಳಿ 'ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು ಕಟ್ಟೇ ಕಟ್ಟುತ್ತೇವ' ಕವಿತೆಯನ್ನು ಹೇಳುತ್ತಾ ನೋಡಿ ಗೋಪಾಲಕೃಷ್ಣ ಅಡಿಗರು ಹೇಳಿರುವ ಈ ಮಾತನ್ನು ನಾವು ಸಾಕ್ಷಾತ್ಕಾರ ಮಾಡಬೇಕು. 'ಕಟ್ಟುವೆವು ನಾವು ಹೊಸ ನಾಡೊಂದನು ರಸದ ಬೀಡೊಂದನು' ಹೇಳುತ್ತ, ನೋಡಿ ವಿ.ಕೃ.ಗೋಕಾಕ್ ಹೇಳಿರುವ ಮಾತನ್ನು ಸಾಕಾರ ಮಾಡಬೇಕು ಎಂದು ಪುಂಗುತ್ತಿದ್ದರು. ತಡೆಯಲಾಗಲಿಲ್ಲ. ತಿದ್ದಲು ಪ್ರಯತ್ನಿಸಿದೆ. ತಬ್ಬಿಬ್ಬಾದ ಎ.ಸಿ.ಯವರನ್ನು ಕಂಡು ನೆರೆದಿದ್ದ ನ್ಯಾಯಾಧೀಶರ ಅಹಂಗೆ ಪೆಟ್ಟು ಬಿದ್ದಿತು. ಅಲ್ಲಿನ ನ್ಯಾಯಾಧೀಶರು ನೀವು ಹೀಗೆ ಹೇಳುವುದಾದರೆ ಮರೆಯಲ್ಲಿ ಹೇಳಿ, ವೇದಿಕೆಯಿಂದ ಕೆಳಗೆ ಬಂದಾಗ ಹೇಳಿ ಎಂದು ಆದೇಶವಿತ್ತರು. ಜಗ್ಗಲಿಲ್ಲ. ನೂರಾರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದಾಗ ಉದ್ಭವವಾಗಿರುವ ತೊಡಕನ್ನು ತೆರೆಮರೆಯಲ್ಲಿ ಪರಿಹರಿಸಿಕೊಳ್ಳಬೇಕಂತೆ. ಸತ್ಯವನ್ನು ಎಲ್ಲರೆದುರು ಹೇಳಬಾರದಂತೆ.

ಬಸವಣ್ಣನವರ 'ಒಲೆ ಹತ್ತಿ ಉರಿದೆಡೆ ನಿಲಬಹುದಲ್ಲದೆ ಧರೆ ಹತ್ತಿ ಉರಿದೆಡೆ ನಿಲಲುಬಾರದಯ್ಯ' ಎಂಬ ವಚನ ನೆನಪಾಯಿತು. ಅಂಬೇಡ್ಕರ್, ಗಾಂಧೀಜಿ, ಅಬ್ರಾಹಂ ಲಿಂಕನ್, ಕೋವೂರ್, ಇಂಗರ್‌ಸಾಲ್ ಇವರೆಲ್ಲ ಜನರ ಮೌಢ್ಯಗಳನ್ನು ಹೋಗಲಾಡಿಸಲು ತಮ್ಮ ಅಮೂಲ್ಯ ಸಮಯವನ್ನು ಮೀಸಲಾಗಿರಿಸಿದವರು. ನಿವೃತ್ತ ನ್ಯಾಯಮೂರ್ತಿಗಳಾದ ನಾಗಮೋಹನ್‌ದಾಸ್ ಅವರು ಜನರಲ್ಲಿ ಸಂವಿಧಾನದ ಅರಿವಿನ ಬೀಜಗಳನ್ನು ಬಿತ್ತಲು ಸೊಗಸಾದ ಭಾಷಣ ಮಾಡಿಕೊಂಡು ಕರ್ನಾಟಕ ಸುತ್ತುತ್ತಿದ್ದಾರೆ.

ಹಿಂದೆ ಪ್ರವಚನ ನೀಡುತ್ತಿದ್ದ ಸ್ವಾಮೀಜಿಗಳು ಅದನ್ನು ಬದಿಗಿರಿಸಿ ಇದೀಗ ಭಾಷಣ ಕ್ಷೇತ್ರಕ್ಕೆ ದಾಂಗುಡಿ ಇಡುತ್ತಿದ್ದಾರೆ. ಧರ್ಮ, ಜಾತಿ, ಭಾಷೆಯ ಹೆಸರಿನಲ್ಲಿ ಜನರ ನಡುವೆ ಕಂದಕಗಳನ್ನು ನಿರ್ಮಿಸುವಂತಹ ಭಾಷಣಕಾರರು ಹೆಚ್ಚುತ್ತಲೇ ಇದ್ದಾರೆ. ವಿಚಾರಪ್ರಚೋದನೆಯ ಭಾಷಣಗಳನ್ನು ಮಾಡುವವರಿಗಿಂತ ಮತೀಯ ಪ್ರಚೋದನೆಯುಂಟು ಮಾಡುವ ಭಾಷಣಕಾರರ ಟಿ.ಆರ್.ಪಿ. ಹೆಚ್ಚುತ್ತಲೇ ಇದೆ. ಭಾರತೀಯ ಸಮಾಜ ನಿಧಾನಕ್ಕೆ ತನ್ನೊಳಗಿನ ಸೌಹಾರ್ದತೆಯನ್ನು ಕಳೆದುಕೊಳ್ಳುತ್ತಿದೆ.

ಫಿಡಲ್ ಕ್ಯಾಸ್ಟ್ರೋ, ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ್ ಮತ್ತು ಅರ್ನೆಸ್ಟೋ ಚೆಗುವೆರಾರು ಲ್ಯಾಟಿನ್ ಅಮೆರಿಕದ ಜನರ ಬಾಳನ್ನು ಹಸನುಗೊಳಿಸಲು ತಮ್ಮ ಬಾಳನ್ನು ಮುಡಿಪಾಗಿಟ್ಟವರು. ಫಿಡಲ್ ಕ್ಯಾಸ್ಟ್ರೋ ಎಷ್ಟು ಓದುತ್ತಿದ್ದನೆಂದರೆ ತನ್ನ ಕಾರಿನಲ್ಲಿ ಓದಲು ಲೈಟಿಟ್ಟುಕೊಂಡಿದ್ದ. ಕ್ಯಾಸ್ಟ್ರೋ, ಬ್ಯಾಟಿಸ್ಟಾ ಸರ್ಕಾರವನ್ನು ಕಿತ್ತೊಗೆದು ಹವಾನದಲ್ಲಿ ಮಾಡಿದ ಏಳು ಗಂಟೆಯ ಭಾಷಣ ವಿಶ್ವದಾಖಲೆಯೇ ಇರಬಹುದೆಂದು ಅವನ ಪ್ರಾಣಮಿತ್ರ ಮಾರ್ಕ್ವೆಜ್ ಹೇಳುತ್ತಾನೆ. ಚಿನುವಾ ಅಚಿಬೆ ಸೃಷ್ಟಿಸಿದ ಜಗದ್ವಿಖ್ಯಾತ ಕಾದಂಬರಿ 'ಥಿಂಗ್ಸ್ ಫಾಲ್ ಅಪಾರ್ಟ್'ನಲ್ಲಿ ಓಗ್ಬಿಫಿ ಎಜಿಯೋಗೊ ಸಂತೆಯೊಳಗೆ ನಿಂತೇ ಭಾಷಣ ಮಾಡಿ ಜನರನ್ನು ಕರ್ತವ್ಯ ನಿಭಾವಣೆಗೆ ಪ್ರೇರೇಪಿಸುತ್ತಾನೆ.

ಹಾಗೆ ನೋಡಿದರೆ ಕನ್ನಡ ದಲಿತ ಸಾಹಿತ್ಯಕ್ಕೆ ರಕ್ತದಾನ ಮಾಡಿದ್ದು ಈ ಬೀದಿಬದಿಯ ಭಾಷಣಗಳೇ. ಪರಿಣಾಮವಾಗಿ ಚಳವಳಿಗಳಿಂದ ಸಾಹಿತ್ಯ ಚಿಗುರೊಡೆದು ಹೊಸ ಜೀವಕಳೆಯನ್ನು ಪಡೆಯಿತು. ಆ ಮೂಲಕ ಕನ್ನಡ ಸಾಹಿತ್ಯದ ಲೋಕದೃಷ್ಟಿಯನ್ನೇ ಬದಲಿಸಿತು. ತಮ್ಮ ವಿಚಾರಪ್ರಚೋದನೆಯ ಭಾಷಣಗಳಿಗೆ ಹಾಸ್ಟೆಲ್, ಸಂತೆ, ಹಬ್ಬ, ಜಾತ್ರೆಗಳನ್ನೇ ಕೇಂದ್ರೀಕರಿಸಿ ಕನ್ನಡದ ದಲಿತ ಚಿಂತಕರು ಎಪ್ಪತ್ತರ ದಶಕವನ್ನು ಎಚ್ಚರದ ಯುಗವನ್ನಾಗಿ ಪರಿವರ್ತಿಸಿದರು. ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಷಣಗಳ ಪಾತ್ರವನ್ನು ಎಷ್ಟೋ ಥೀಸಿಸ್ಸುಗಳಾಗಿ ಮಂಡಿಸಬಹುದು. ಆದ್ದರಿಂದ ಜನರ ಜೀವನವನ್ನು ರೂಪಿಸುವಲ್ಲಿ ಕಾಲದೇಶಾತೀತವಾಗಿ ಭಾಷಣಗಳ ಮಹತ್ವ ಬರೆವಣಿಗೆಗಿಂತಲೂ ದೊಡ್ಡದೇ ಇದೆ. ಧರ್ಮ, ಜಾತಿ, ಲಿಂಗ, ಭಾಷೆ, ಜನಾಂಗಗಳ ಹೆಸರಿನಲ್ಲಿ ಹವಣು ಸಾಧಿಸಲು ಹುಟ್ಟುವ ಕಿಡಿಗಳ ರೂಪದ ಭಾಷಣಗಳು ತಾತ್ಪೂರ್ತಿಕ ಲಾಭ ತರಬಹುದು. ಅದೇ ಇವುಗಳ ಮಧ್ಯೆ ಸಾಮರಸ್ಯ ತರಲು ಹುಟ್ಟುವ ಮಾತುಗಳು ಮೆಲ್ಲಮೆಲ್ಲನೆ ಉರಿವ ಪರಂಜ್ಯೋತಿಗಳು. ●